KUWS & DB has been informed to expedite the scheme works. Since the bid amount was on higher side against the tender, Tender has been cancelled and short term tender has been called for on 06-02-2009.

ಸಂ.ಗ್ರಾಅಪ 16 ಗ್ರಾನೀಸ(1)09

(ಶೋಭಾ ಕರಂದ್ಲಾಜೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

(13ನೇ ವಿಧಾನ ಸಭೆ. 2ನೇ ಅಧಿವೇಶನ)

75 ಶ್ರೀ ಮಂಜು.ಎ (ಅರಕಲಗೂಡು)

ಮಾನ್ಯ ವಸತಿ ಹಾಗೂ ಮುಜರಾಯಿ ಸಚಿವರು

ಅ) ಹಾಸನ ಜಿಲ್ಲೆಯ ಅರಕಲಗೂಡು ಹಾಗೂ ಹೊಳೇನರಸೀಪುರ ತಾಲ್ಲೂಕುಗಳಲ್ಲಿ 2007–08ನೇ ಸಾಲಿಗೆ ಮಂಜೂರು ಮಾಡಲ್ಪಟ್ಟ ಆಶ್ರಯ ಮನೆಗಳೆಷ್ಟು (ವಿವರಗಳನ್ನು ಒದಗಿಸುವುದು);

2007–08ನೇ ಸಾಲಿಗೆ ರಾಜ್ಯ ಸರ್ಕಾರವು ಆಶ್ರಯ ಯೋಜನೆಯಡಿ ಗುರಿಯನ್ನು ನೀಡಿರುವುದಿಲ್ಲ. ಆದರೆ, 2007–08ನೇ ಸಾಲಿನ ಆರ್ಥಿಕ ವರ್ಷದಲ್ಲಿ ಗ್ರಾಮೀಣ ಆಶ್ರಯ ಯೋಜನೆಯಡಿಯಲ್ಲಿ ಹಿಂದಿನ ಶ್ರೇಣಿಯಲ್ಲಿ ಪ್ರಗತಿಯಲ್ಲಿದ್ದ 1669 ಮನೆಗಳನ್ನು ಪೂರ್ಣಗೊಳಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.

2007–08ನೇ ಆರ್ಥಿಕ ವರ್ಷದಲ್ಲಿ ಹೊಳೇನರಸೀಪುರ ಮನೆಗಳು			
ಯೋಜನೆ	ಅರಕಲಗೂಡು	ಹೊಳೆನರಸೀಪುರ	ಒಟ್ಟು
ಗ್ರಾಮೀಣ ಆಶ್ರಯ	955	714	1669

ಆ) ಹಾಗಿದ್ದಲ್ಲಿ, ಬಡ ಫಲಾನುಭವಿಗಳಿಗೆ ನೀಡಲಾದ ಆಶ್ರಯ ಮನೆಗಳೆಷ್ಟು; ಈ ಮೇಲ್ಕಂಡ ಎಲ್ಲಾ ಮನೆಗಳನ್ನೂ ಬಡವರಿಗಾಗಿಯೇ ನೀಡಲಾಗಿದೆ.

ಇ) ಆಶ್ರಯ ಯೋಜನೆಯಡಿಯಲ್ಲಿ ಮಂಜೂರಾಗಿ ಪೂರ್ಣಗೊಂಡಿರುವ ಮನೆಗಳ ಸಂಖ್ಯೆ ಎಷ್ಟು ಹಾಗೂ ರದ್ದುಪಡಿಸಿರುವ ಮನೆಗಳ ಸಂಖ್ಯೆ ಎಷ್ಟು?

ಆಶ್ರಯ ಯೋಜನೆಯಡಿ ಅರಕಲಗೂಡು ತಾಲ್ಲೂಕು ಮತ್ತು ಹೊಳೇನರಸೀಪುರ ತಾಲ್ಲೂಕುಗಳಿಗೆ ಮಂಜೂರಾದ ಮನೆಗಳು, ಪೂರ್ಣಗೊಂಡ ಮನೆಗಳು ಮತ್ತು ರದ್ದು ಪಡಿಸಿರುವ ಮನೆಗಳ ವಿವರಗಳು ಕೆಳಗಿನಂತಿವೆ.

ಅರಕಲಗೂಡು ತಾಲ್ಲೂಕು:

ವಿವರಗಳು	ಗ್ರಾಮೀಣ ಆಶ್ರಯ (1995–96 ರಿಂದ 2008–09ರವರೆಗೆ)	ನಗರ ಆಶ್ರಯ (1995–96 ರಿಂದ 2005–06 ರವರೆಗೆ)
ಮಂಜೂರಾದ ಮನೆಗಳು	6518	1082
ನಿಗಮದಿಂದ ಅನುಮೋದಿಸಿದ ಮನೆಗಳ ಸಂಖ್ಯೆ	6402	402
ಪೂರ್ಣಗೊಂಡ ಮನೆಗಳು	4204	396
ಪ್ರಗತಿಯಲ್ಲಿರುವ ಮನೆಗಳು	1556	6
ಇನ್ನೂ ಪ್ರಾರಂಭವಾಗ ಬೇಕಾಗಿರುವ ಮನೆಗಳು	505	0
ರದ್ದು ಪಡಿಸಿದ ಮನೆಗಳು	142	680

ಹೊಳೇನಗಸೀಪುರ ತಾಲ್ಲೂಕು:

ವಿವರಗಳು	ಗ್ರಾಮೀಣ ಆಶ್ರಯ (1995–96 ರಿಂದ 2008–09ರವರೆಗೆ)	ನಗರ ಆಶ್ರಯ (1995–96 ರಿಂದ 2005–06 ರವರೆಗೆ)
ಮಂಜೂರಾದ ಮನೆಗಳು	8335	1307
ನಿಗಮದಿಂದ ಅನುಮೋದಿಸಿದ ಮನೆಗಳ ಸಂಖ್ಯೆ	7643	926
ಪೂರ್ಣಗೊಂಡ ಮನೆಗಳು	6135	920
ಪ್ರಗತಿಯಲ್ಲಿರುವ ಮನೆಗಳು	1252	6
ಇನ್ನೂ ಪ್ರಾರಂಭವಾಗ ಬೇಕಾಗಿರುವ ಮನೆಗಳು	241	0
ರದ್ದು ಪಡಿಸಿದ ಮನೆಗಳು	710	381

ಸಂಖ್ಯೆ: ವಇ 22 ಹೆಚ್‌ಎಎಂ 2009

(ಮಾಲೂರು ಎಸ್.ಎನ್. ಕೃಷ್ಣಯ್ಯ ಶೆಟ್ಟಿ)
ವಸತಿ ಹಾಗೂ ಮುಜರಾಯಿ ಸಚಿವರು

ಕರ್ನಾಟಕ ವಿಧಾನಸಭೆ
(13ನೇ ವಿಧಾನ ಸಭೆ. 2ನೇ ಅಧಿವೇಶನ)

91ಶ್ರೀ ಜಯಚಂದ್ರ ಟಿ.ಬಿ. (ಶಿರಾ)

ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು

ಅ) ತುಮಕೂರು ಜಿಲ್ಲೆಯ, ಚಿಕ್ಕನಾಯಕನ ಹಳ್ಳಿ ತಾಲ್ಲೂಕು ಹುಳಿಯಾರು ಮತ್ತು ದಸೂಡಿ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ರಾಜೀವ್ ಗಾಂಧಿ ವಸತಿ ನಿಗಮದವತಿಯಿಂದ ಮನೆಕಟ್ಟುವಲ್ಲಿ ವ್ಯಾಪಕ ಅವ್ಯವಹಾರ ವಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಹೌದು.

ಆ) ಹಾಗಿದ್ದಲ್ಲಿ, ಈ ಹಗರಣದಲ್ಲಿ ಭಾಗಿಯಾಗಿರುವವರು ಯಾರುಯಾರು; ಅವರುಗಳ ಮೇಲೆ ಸರ್ಕಾರ ಕಾನೂನಿನ್ವಯ ತೆಗೆದುಕೊಂಡ ಕ್ರಮಗಳೇನು (ಸಂಪೂರ್ಣ ವಿವರ ನೀಡುವುದು)?

ಹುಳಿಯಾರು ಗ್ರಾಮ ಪಂಚಾಯಿತಿಗೆ ಸಂಬಂಧಿಸಿದಂತೆ ಈ ಹಗರಣದಲ್ಲಿ ಹುಳಿಯಾರು ಗ್ರಾಮಪಂಚಾಯಿತಿಯ ಕಾರ್ಯದರ್ಶಿ, ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರುಗಳು ಭಾಗಿಯಾಗಿರುವುದಾಗಿ ವರದಿಯಾಗಿದೆ. ದಿನಾಂಕ:13-01-2009ರಂದು ಹುಳಿಯಾರು ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಯಾದ ಶ್ರೀ ನಂದಕೃಷ್ಣರವರನ್ನು ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ. ಗ್ರಾಮ ಪಂಚಾಯತಿಯ ಕಾರ್ಯದರ್ಶಿ, ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರುಗಳು ಮೇಲೆ ದಿನಾಂಕ: 31-01-2009 ರಂದು ಕ್ರಿಮಿನಲ್ ಕೇಸ್ ದಾಖಲಾಗಿಸಲಾಗಿದೆ ಹಾಗೂ ಅವ್ಯವಹಾರಗಳಿಗೆ ಕಾರಣರಾಗಿರುವ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಅಧ್ಯಕ್ಷರು, ಉಪಾಧ್ಯಕ್ಷರು, ಹಾಗೂ ಸದಸ್ಯರುಗಳ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ನಿಯಮ 48(4) ಹಾಗೂ 43(ಎ) ರನ್ವಯ ಸದಸ್ಯತ್ವದಿಂದ ವಜಾ ಮಾಡಲು ಪ್ರಸ್ತಾಪಿಸಲಾಗಿದೆ.